# ಪದ್ಮನಾಭತೀರ್ಥರು – ಸಂಗ್ರಹ – ನರಹರಿಸುಮಧ್ವ

ಪುಣ್ಯದಿನ - ಕಾರ್ತೀಕ ಬಹುಳ ಚತುರ್ದಶಿ

ಇವರ ಕಾಲ - ಕ್ರಿ.ಶ. **1317-1324** (ಪೀಠಾಧಿಪತಿಗಳಾಗಿದ್ದದು)





ಮೂಲವೃಂದಾವನ (ನವವೃಂದಾವನ) ಮೃತ್ತಿಕಾ ವೃಂದಾವನ (ಮುಳಬಾಗಿಲು)

**ಶ್ರುತ್ವಾ ಮತ್ವಾ ಸದಾ ಭಕ್ತ್ಯಾ ವಿರಕ್ತ್ಯಾ ನಿತ್ಯಸೇವಯಾ ।**
**ತಸ್ಮೈ ಪ್ರಸನ್ನ: ಪ್ರಜ್ಞೇಕ್ಷ: ಸದ್ಯೋ ವಿದ್ಯಾಂ ದದೌ ಶುಭಾಮ್ ॥**

ಶ್ರವಣ, ಮನನ, ಸಂತತವಾದ ಭಕ್ತಿ, ವಿರಕ್ತಿ ಮತ್ತು ನಿತ್ಯ ಸೇವೆಗಳಿಂದ ಪ್ರಸನ್ನರಾದ ಶ್ರೀಪೂರ್ಣಪ್ರಜ್ಞರು ಆ ಪದ್ಮನಾಭತೀರ್ಥರಿಗೆ ಆಗಲೇ ನಿರ್ಮಲವಾದ ಆಧ್ಯತ್ಮವಿದ್ಯೆಯನ್ನು ಉಪದೇಶಿಸಿದರು. ವಾದಿಸಿಂಹ ಶ್ರೀಪದ್ಮನಾಭತೀರ್ಥರು ತಮ್ಮ ಗುಂಪಿನಲ್ಲಿ ತಾವೇ ವೀರರೆಂದು ಭಾವಿಸಿದ್ದ ಮಾಯಾವಾದಿಗಳೆಂಬ ಗ್ರಾಮಸಿಂಹಗಳನ್ನು ತಮ್ಮ ವ್ಯಾಖ್ಯಾನಧ್ವನಿಯೆಂಬ ಗರ್ಜನೆ ಮಾತ್ರದಿಂದಲೇ ಪರಾಭವಗೊಳಿಸಿದರು. ಅವರು ದುರ್ವಾದಿ ಗಜಕೇಸರಿಯಾಗಿದ್ದರು. ಶ್ರೀಮಧ್ವಾಚಾರ್ಯರ "ಅನುವ್ಯಾಖ್ಯಾನ"ವೆಂಬ ಗ್ರಂಥಕ್ಕೆ ಸನ್ನ್ಯಾಯರತ್ನಾವಲಿ ಎಂಬ ಮಂಗಲಕರವಾದ ಅಮೂಲ್ಯವಾದ ಟೀಕೆ ಉತ್ಪನ್ನವಾಯಿತು ಪದ್ಮನಾಭತೀರ್ಥರಿಂದ., ಜೊತೆಗೆ ಸತ್ತರ್ಕದೀಪಾವಲಿ, ಗೀತಾಭಾಷ್ಯಟೀಕಾ, ಗೀತಾತಾತ್ಪರ್ಯಟೀಕಾ, ದಶಪ್ರಕರಣಟೀಕಾ, ಮಧ್ವಾಷ್ಟಕ ಮೊದಲಾದ ಇನ್ನೂ ಅನೇಕ ಗ್ರಂಥಗಳನ್ನು ರಚಿಸಿರುವರು.

## ಪ್ರಪ್ರಥಮರು –

೧. ಶ್ರೀಮದಾಚಾರ್ಯರ ಪ್ರಥಮ ಶಿಷ್ಯರು

೨. ಪ್ರಪ್ರಥಮ ವೃಂದಾವನಸ್ಥರು

೩. ಆಚಾರ್ಯರ ಗ್ರಂಥಗಳಿಗೆ ಪ್ರಪ್ರಥಮ ಟೀಕಾಕಾರರು

೪. ಮಧ್ವಮತದ ಪ್ರಪ್ರಥಮ ಪ್ರಸಾರಕರು

೫. ವೃಂದಾವನ - ನವವೃಂದಾವನ - **ಪ್ರಪ್ರಥಮ** ವೃಂದಾವನಸ್ಥರು

೬. ಇವರ ಮೃತ್ತಿಕಾ ವೃಂದಾವನ – **ಮುಳಬಾಗಿಲು**

೭. ಪೂರ್ವಾಶ್ರಮ ನಾಮ - ಶೋಭನಭಟ್ಟರು

**ಶ್ರೀಮಧ್ವ ಸಂಸೇವನಲಬ್ಧ ಶುದ್ಧ । ವಿದ್ಯಾ ಸುಧಾಂಭೋನಿಧಯೋಽಮಲಾ ಯೇ ॥**
**ಕೃಪಾಲವಃ ಪಂಕಜನಾಭತೀರ್ಥಾಃ । ಕೃಪಾಲವಃಸ್ಯಾನ್ಮಯಿ ನಿತ್ಯಮೇಷಾಮ್ ॥**

**ಪೂರ್ಣಪ್ರಜ್ಞರ ಉತ್ತಮ ಸೇವೆಯಿಂದ ಹೊಂದಿದ ಪರಿಶುದ್ಧವಾದ ವಿದ್ಯಾರೂಪ ಅಮೃತದ ಸಮುದ್ರದಂತಿರುವ, ನಿರ್ಮಲವಾದ ಮನಸ್ಸುಳ್ಳ, ಕೃಪಾಳುಗಳಾದ ಪದ್ಮನಾಭತೀರ್ಥರ ಕೃಪಾಲೇಶವಾದರೂ ನನ್ನ ಮೇಲೆ ಸದಾ ಇರಲಿ.**

**ಪೂರ್ಣಪ್ರಜ್ಞಕೃತಂ ಭಾಷ್ಯಮಾದೌ ತದ್ಭಾವ ಪೂರ್ವಕಮ್ ।**
**ಯೋ ವ್ಯಾಕರೋನ್ನುಮಸ್ತಸ್ಮೈ ಪದ್ಮನಾಭಾಖ್ಯ ಯೋಗಿನೇ ॥**

ಪೂರ್ಣಪ್ರಜ್ಞರು ರಚಿಸಿದ ಭಾಷ್ಯವನ್ನು ಅವರ ಅಭಿಪ್ರಾಯವನ್ನರಿತು ಪ್ರಪ್ರಥಮವಾಗಿ ವ್ಯಾಖ್ಯಾನಿಸಿದ ಯೋಗಿಗಳಾದ ಪದ್ಮನಾಭತೀರ್ಥರನ್ನು ವಂದಿಸುವೆ.

ಅವರಿಗೆ ಶ್ರೀಮದಾಚಾರ್ಯರು "ಗೋಪೀನಾಥದೇವ"ರ ವಿಗ್ರಹವನ್ನು ಕೊಟ್ಟು ಅನುಗ್ರಹಿಸಿದರು. ಆ ಗೋಪಿನಾಥದೇವರ ವಿಗ್ರಹವೇ ಇಂದು ಶ್ರೀಪಾದರಾಜರ ಮಠದ ಮೂಲ ದೇವರಾಗಿ ಪೂಜಿಸಲ್ಪಡುತ್ತಿದ್ದಾನೆ.

**ಅವರ ಗ್ರಂಥಗಳು** –

೧. ಮಾಯಾವಾದ ಖಂಡನ ಟೀಕಾ,

೨. ಉಪಾಧಿಖಂಡನಟೀಕಾ (ನ್ಯಾಯಾವಲೀ)

೩. ಪ್ರಪಂಚ ಮಿಥ್ಯಾತ್ವಾನುಮಾನ ಖಂಡನ ಟೀಕಾ.

೪. ಕಥಾಲಕ್ಷಣ ಟೀಕಾ,

೫. ಗೀತಾ ಭಾಷ್ಯ ಪ್ರಾಚೀನ ಟೀಕಾ, (ಭಾವಪ್ರದೀಪಿಕಾ)

೬. ಗೀತಾ ತಾತ್ಪರ್ಯ ನಿರ್ಣಯ ಟೀಕಾ (ಪ್ರಕಾಶಿಕಾ)

೭. ಸತ್ತರ್ಕ ದೀಪಾವಲಿ (ಶ್ರೀಮದ್ಬ್ರಹ್ಮಸೂತ್ರಭಾಷ್ಯಟೀಕಾ)

೮. ಸನ್ನ್ಯಾಯ ರತ್ನಾವಳಿ, (ಅನುವ್ಯಾಖ್ಯಾನ ಟೀಕಾ)

೯. ತತ್ತ್ವೋದ್ದ್ಯೋತ ಟೀಕಾ,

೧೦. ಪ್ರಮಾಣ ಲಕ್ಷಣ ಟೀಕಾ,

೧೧. ವಿಷ್ಣುತತ್ವನಿರ್ಣಯ ಟೀಕಾ (ನ್ಯಾಯರತ್ನಾವಲೀ)

೧೨. ವಾಯುಲೀಲಾವಿಸ್ತರಣ

೧೩. ತತ್ವವಿವೇಕ ಟೀಕಾ

೧೪. ಕರ್ಮನಿರ್ಣಯ ಟೀಕಾ

೧೫. ಆನಂದಮಾಲಾ

೧೬. ತತ್ವಸಂಖ್ಯಾನ ಟೀಕಾ

ಶೋಭನಭಟ್ಟರು ಗೋದಾವರಿತೀರದಲ್ಲಿ ಶ್ರೀಮದಾಚಾರ್ಯರ ಗ್ರಂಥಗಳನ್ನು ಕಂಡರು. ಶ್ರೀಮದಾಚಾರ್ಯರನ್ನು ಬಗೆಬಗೆಯಾಗಿ ಪರೀಕ್ಷಿಸಿ ಪರಾಭವಗೊಂಡ ಶೋಭನಭಟ್ಟರು ಆವರೆಗಿನ ಇಪ್ಪತ್ತೊಂದು ಕುಭಾಷ್ಯಗಳಲ್ಲೂ ದೋಷಗಳನ್ನು ಕಂಡಿದ್ದ ಅವರಿಗೆ ನಿರ್ದುಷ್ಟವಾದ ಶ್ರೀಮಧ್ವಬಾಷ್ಯದಿಂದ ದೊರೆಕಿದ ಆನಂದ ಅಪೂರ್ವವಾಗಿತ್ತು. ಕಮಲಪುಷ್ಪದ ಮಕರಂದವನ್ನು ಪಾನಮಾಡಿದ ಬಿಳಿರೆಕ್ಕೆಗಳ ಹಂಸಪಕ್ಷಿಯು ಇತರ ಪುಷ್ಪಗಳ ರಸವನ್ನು ಹೇಗೆ ಬಯಸಲಾರದೋ ಹಾಗೆ ಅಧ್ಭುತವಾದ ಮಧ್ವಬಾಷ್ಯವನ್ನು ಶ್ರವಣಮಾಡಿದ ಶೋಭನಭಟ್ಟರು ಇತರ ಯಾವಭಾಶ್ಯಗಳಲ್ಲೂ ಆದರ ತಾಳಲಿಲ್ಲ. ವಾದಿಸಿಂಹರಾಗಿದ್ದ ಪದ್ಮನಾಭತೀರ್ಥರು ತಮ್ಮ ಗುಂಪಿನಲ್ಲಿ ತಾವೇ ವೀರರೆಂದು ಭಾವಿಸಿದ್ದ ಮಾಯಾವಾದಿಗಳೆಂಬ ಗ್ರಾಮಸಿಂಹಗಳನ್ನು ತಮ್ಮ ವ್ಯಾಖ್ಯಾನಧ್ವನಿಯೆಂಬ ಗರ್ಜನೆ ಮಾತ್ರದಿಂದಲೇ ಪರಾಭವಗೊಳಿಸಿದರು

**ಪದ್ಮನಾಭತೀರ್ಥರಿಂದ ಬಲಮುರಿಶಂಖದ ಉದಾಹರಣೆಯೊಂದಿಗೆ ಮಧ್ವಶಾಸ್ತ್ರದ ಪ್ರವಚನ ಮತ್ತು ಪ್ರಸಾರ –** ಬಲಮುರಿ ಶಂಖವು ಲಕ್ಷ್ಮೀಸನ್ನಿಧಾನ ಎನ್ನಿಸಿದ್ದರೆ, ಬಲಮುರಿ ಶಂಖವು ನಾರಾಯಣನ ಪ್ರತೀಕ ಎನ್ನಿಸಿದೆ. ಎಂದರೆ ಸಾಲಿಗ್ರಾಮ ಸುದರ್ಶನಗಳಂತೆ ಅದು ಪೂಜ್ಯ ಎಂಬುದು ವಿಶೇಷ. ಅದು ಪುಟ್ಟಿ ಪುಡಿಮಾಡಲಾಗದಷ್ಟು ದೃಢ ಎಂಬ ಭಾವವೂ ಇಲ್ಲಿ ಸೂಚಿತ. ಯಾವನು ತಾನಾಗಿ ಲಭಿಸಿದ, ಪುಣ್ಯಹೀನರಿಗೆ ಎಂದೂ ದೊರೆಯದ, ಅಮೂಲ್ಯವಾದ ಬಲಮುರಿಶಂಖದಂತಹ ಶ್ರೀಪೂರ್ಣಪ್ರಜ್ಞರ ಶಾಸ್ತ್ರವನ್ನು ಪರಿತ್ಯಜಿಸುವನೋ ಅಂತಹ ದುರ್ಜನನು ಬಲಮುರಿಶಂಖವನ್ನು ತೊರೆದವನಂತೆಯೇ ಸರಿ |ಅಥವ ಇವನಿ ಸದೃಶವಾದ ನೀಚಬುದ್ಧಿಯವನು ದೊರೆಯುವುದೇ ಇಲ್ಲ. (ಬಲಮುರಿಶಂಖವನ್ನು ತ್ಯಜಿಸುವುದಕ್ಕಿಂತಲೂ ಶ್ರೀಮಧ್ವಶಾಸ್ತ್ರವನ್ನು ತೊರೆಯುವುದು ಹೆಚ್ಚು ಮೂರ್ಖತನ).

ಸುಣ್ಣ ಮಾಡುವವನು ಬಿಸಾಡಿದ ಬಲಮುರಿಶಂಖವನ್ನು ಅದರ ಬೆಲೆ ಅರಿತ ಮತ್ತೊಬ್ಬನು ನೋಡಿ ಅದನ್ನು ಅಪಾರಬೆಲೆಗೆ ಮಾರಿ ಶ್ರೀಮಂತನೆನ್ನಿಸಿದ. ಆದರೆ ಅನರ್ಘ್ಯವಾದ ಬಲಮುರಿಶಮ್ಖದ ಪೂರ್ಣಪ್ರಯೋಜನವನ್ನು ಪಡೆಯದೆ ಅದನ್ನು ಮಾರಿ ಅಪಾರವಾಗಿ ಲೌಕಿಕ ಧನವನ್ನು ಮಾತ್ರ ಗಳಿಸುವವನು ಸಹ ಪೂರ್ಣ ವಿವೇಕಿ ಎನ್ನಿಸಲಾರನು ಎಂದು ಭಾವ. ಉದಾರ ನಡೆಯ ರಾಜನು, ಅಂತಹ ಶ್ರೇಷ್ಟವಾದ ಬಲಮುರಿಶಂಖವನ್ನು ಕೊಂಡು ಭಕ್ತಿಯಿಂದ ನಿರಂತರ ಪೂಜಿಸುತ್ತ, ಮಾತು ಮತ್ತು ಮನಸ್ಸುಗಳಿಗೆ ನಿಲುಕದ ಅಪಾರ ಐಶ್ವರ್ಯವನ್ನು ಸಂಪಾದಿಸಿಕೊಂಡನು. (ಬಲಮುರಿಶಂಖದಂತಹ ಮಧ್ವಶಾಸ್ತ್ರ ದೊರೆಯುವುದು ರಾಜರಂತಹ ಉತ್ತಮಾಧಿಕಾರಿಗಳಿಗೆ ಮಾತ್ರ)